## ರೋಗಾಣು ಬಿತ್ತುವ ಹ್ಯಾಂಡ್ ಡ್ರೈಯರ್

ಪ್ರತಿಷ್ಠಿತ ಸಾರ್ವಜನಿಕ ಶೌಚಾಲಯಗಳಲ್ಲಿ ಇಟ್ಟಿರುವ ಕೈ ಒಣಗಿಸುವ ಯಂತ್ರ (ಹ್ಯಾಂಡ್ ಡ್ರೈಯರ್)ಗಳು ಅಧಿಕ ಪ್ರಮಾಣದಲ್ಲಿ ರೋಗಾಣುಗಳನ್ನು ಹರಡುತ್ತದೆ ಎಂದು ನೂತನ ಅಧ್ಯಯನವೊಂದು ದೃಢಪಡಿಸಿದೆ.

ಒದ್ದೆಯಾದ ಕೈಗಳು ಬಹುಬೇಗ ಒಣಗಲಿ ಎಂದು ಇದನ್ನು ಪ್ರತಿಷ್ಠಿತ ಹೋಟೆಲ್– ವಿಮಾನ ನಿಲ್ದಾಣಗಳ ಶೌಚಾಲಯಗಳಲ್ಲಿ ಅಳವಡಿಸಿರುತ್ತಾರೆ. ಆದರೆ, ಅವು ಆರೋಗ್ಯಕ್ಕೆ ಮಾರಕವಾದ ಸೂಕ್ಷ್ಮ ರೋಗಾಣುಗಳನ್ನು ಕೈಗಳಿಗೆ ಸಿಂಪಡಿಸುತ್ತವೆ ಎನ್ನುವುದು ಈ ಅಧ್ಯಯನದಿಂದ ತಿಳಿದುಬಂದಿದೆ.

## ಇದು ಅಧಿಕಾರ ಖಿನ್ನತೆ!

ಮುಖ್ಯ ಜವಾಬ್ದಾರಿ ನಿರ್ವಹಿಸುವ ಮಹಿಳೆಯರು ಅಧಿಕಾರದಿಂದ ವಂಚಿತರಾದರೆ ಅವರು ಖಿನ್ನತೆಯನ್ನು ಎದುರಿಸಬೇಕಾಗುತ್ತದೆ ಎಂಬ ಅಚ್ಚರಿಯ ಸಂಗತಿ ಸಂಶೋಧಕರ ಅಧ್ಯಯನದಿಂದ ತಿಳಿದುಬಂದಿದೆ.

ಅಧಿಕಾರ ಚಲಾಯಿಸಲು ಮಹಿಳೆ ಸಮರ್ಥಳಾಗಿರುತ್ತಾಳೆ. ಒಂದು ಪಕ್ಷ ಅಧಿಕಾರದ ನಿರೀಕ್ಷೆಯಲ್ಲಿರುವ ಅವಳಿಗೆ ಅದು ತಪ್ಪಿದರೆ ಪುರುಷರಿಗಿಂತ ಆಕೆ ಬಹು ಬೇಗ ಖಿನ್ನತೆಗೆ ಒಳಗಾಗುತ್ತಾಳೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಸಂಶೋಧಕರು ಮಧ್ಯವಯಸ್ಕ 1300 ಪುರುಷರು ಹಾಗೂ 1500 ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಿದ್ದರು.

## ನಿಧಾನಕ್ಕೆ ಹೃದಯ ಹಿಂಡುವ ಬೊಜ್ಜು

ಬೊಜ್ಜು ನಿಧಾನವಾಗಿ ಹೃದಯವನ್ನು ಘಾಸಿಗೊಳಿಸುತ್ತದೆ. ಬೊಜ್ಜುಳ್ಳ ಮನುಷ್ಯರಿಗೆ ಯಾವುದೇ ಮುನ್ಸೂಚನೆ ಇಲ್ಲದೆ ಹೃದಯಾಘಾತ ಸಂಭವಿಸಬಹುದು ಎಂದು ನ್ಯೂಯಾರ್ಕ್ ಸಂಶೋಧಕರು ಹೇಳಿದ್ದಾರೆ.

ಸಾಮಾನ್ಯವಾಗಿ ಹೃದ್ರೋಗಕ್ಕೆ ಅಧಿಕ ತೂಕ ಮೊದಲ ಕಾರಣ. ಮತ್ತೊಂದು ಅಧಿಕ ರಕ್ತದೊತ್ತಡ. ಸಾಮಾನ್ಯವಾಗಿ ತೂಕದ ಮನುಷ್ಯರು ಮಧುಮೇಹಕ್ಕೆ ತುತ್ತಾಗುತ್ತಾರೆ. ಮಧುಮೇಹ– ಅಧಿಕರಕ್ತದೊತ್ತಡಷ್ಟೇ ಬೊಜ್ಜು ಹೃದಯಕ್ಕೆ ಹಾನಿಯನ್ನು ಉಂಟುಮಾಡುತ್ತದೆ. ಇದೇ ಕಾರಣದ ಹಿನ್ನೆಲೆಯಲ್ಲಿ 'ಬೊಜ್ಜನ್ನು ಹೃದಯ ಹಂತಕ' ಎಂದು ಜನಸಾಮಾನ್ಯರು ಹೇಳುತ್ತಾರೆ ಎಂಬ ಮಾತನ್ನು ಸಂಶೋಧಕರು ಹೇಳಿದ್ದಾರೆ.

## ಲೈಂಗಿಕ ಆಯ್ಕೆ ಅನುವಂಶೀಯ!

ಲೈಂಗಿಕ ಮನೋಭಾವ ಅದು ಸಹವಾಸ ಅಥವಾ ಸಮಾಜದಿಂದ ಪ್ರಭಾವದಿಂದ ರೂಪಿತಗೊಳ್ಳುವುದಿಲ್ಲ, ಅದಕ್ಕೆ ಅನುವಂಶೀಯ ಗುಣವೇ ಮೂಲ ಕಾರಣ ಎಂದು ಲಂಡನ್ ಸಂಶೋಧಕರು ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

ಸಂಶೋಧಕರ ಈ ಅಧ್ಯಯನ ದೀರ್ಘ ಕಾಲ ನಡೆದಿದೆ. ಅವರು ತಮ್ಮ ಅಧ್ಯಯನ ಸಂಬಂಧ ಸುಮಾರು 409 ಸಲಿಂಗ ಪುರುಷ ಜೋಡಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾಗಿ ಹೇಳಿಕೊಂಡಿದ್ದಾರೆ.

ಗಂಡಸಿನ ಅನುವಂಶೀಯತೆಗೆ ಎರಡು ಬಗೆಯ ಕ್ರೊಮೋಸೋಮ್ ಕಾರಣವಾಗಿರುತ್ತವೆ. ಅದರಲ್ಲಿ 'ಎಕ್ಸ್' ಎನ್ನುವುದು 'ಗಂಡು' ಎನ್ನುವುದನ್ನು ಸೂಚಿಸಿದರೆ, '8' ಆತನ ಲೈಂಗಿಕ ನಿಲುವನ್ನು ನಿರ್ಧರಿಸುತ್ತದೆ ಎಂಬುದು ಇವರ ಅಧ್ಯಯನದಿಂದ ತಿಳಿದುಬಂದಿದೆ.

–ಟಿಪ್ಸ್

---

## ನಕ್ಕು ಬಿಡಿ

ಉಪಾಧ್ಯಾಯರು: ಗುಂಡ ನೀನು ದಿನವೂ ರಾಮಾಯಣ ಓದಬೇಕು.

ಗುಂಡ: ಸಾಧ್ಯವಿಲ್ಲ ಸಾರ್.

ಉಪಾಧ್ಯಾಯರು: ಯಾಕೆ?

ಗುಂಡ: ನಮ್ಮ ಮನೆಯಲ್ಲಿ ಪ್ರತಿ ದಿನವೂ ಮಹಾಭಾರತ ನಡೆಯುತ್ತಿರುತ್ತದೆ.

★★★



ನಾಣಿ: ನನಗೆ 500 ರೂ. ಸಾಲ ಕೊಡುವಷ್ಟು ಸಾಮರ್ಥ್ಯ ನಿನಗಿದೆಯೇ?

ಗುಂಡ: ಖಂಡಿತಾ ಇದೆ. ಆದರೆ 500 ರೂ. ಇಲ್ಲ.

★★★

ನಾಣಿ: ಏನೋ ಗುಂಡ ಇಂದು ಭಾನುವಾರ! ಎಲ್ಲಿಗೆ ಹೊರಟಿದ್ದೀಯಾ?

ಗುಂಡ: ಆಫೀಸಿಗೆ.

ನಾಣಿ: ರಜಾದ ದಿನ ಆಫೀಸಿಗೆ ಯಾಕೆ?

ಗುಂಡ: ಮನೆಯಲ್ಲಿ ಮಲಗಿದರೆ ನಿದ್ರೆ ಬರುವುದಿಲ್ಲ ಅದಕ್ಕೆ.

★★★

ಗುಂಡ: ನ್ಯಾಯಾಧೀಶರು ತೀರ್ಪಿತ್ತ ಮೇಲೆ ನೀವು ತುಂಬಾ ದಿನ ಕಾಣಲೇ ಇಲ್ಲವಲ್ಲ?

ಗಣಿತದ ಮೇಷ್ಟ್ರು: ಅವರು ನನ್ನನ್ನು ಕಂಬಿ ಎಣಿಸಲು ಕಳುಹಿಸಿದ್ದರು.

★★★

ರಾಧಮ್ಮ: ನಿಮ್ಮತ್ತೆಗೆ ಹಾವು ಕಚ್ಚಿತು.

ರಂಗಮ್ಮ: ಹೌದಾ? ತುಂಬಾ ಸಂತೋಷ. ಸ್ವೀಟ್ಸ್ ತಗೊಳ್ಳಿ.

ರಾಧಮ್ಮ: ಆದರೆ, ಹಾವು ಸತ್ತಿದೆ.

★★★

ಅಧಿಕಾರಿ: (ತಮ್ಮ ಕಾರಿನ ಚಾಲಕನ ಪುಟ್ಟ ಮಗಳಿಗೆ) ನಾನು ಯಾರೂಂತ ಗೊತ್ತೇನಮ್ಮ.

ಚಾಲಕನ ಮಗಳು: ಗೊತ್ತು ಸಾರ್! ದಿನಾ ನಮ್ಮಪ್ಪನ ಕಾರಲ್ಲಿ ಹೋಗ್ತಾ ಬರ್ತಾ ಇರ್ತೀರಲ್ಲ.

★★★

ಮಗಳು: ಅಮ್ಮಾ ಆ ಹುಡುಗ ರೂಪವಂತ, ಗುಣವಂತ, ಹಣವಂತ ಎಲ್ಲಾ ಸರಿ! ಆದರೆ ಅವನ ತಲೆಯಲ್ಲಿ ಜುಟ್ಟಿದೆ.

ತಾಯಿ: ಜುಟ್ಟಿದ್ದರೇನಂತೆ? ಹೇಗಿದ್ದರೂ ಅದು ನಿನ್ನ ಕೈಲೇ ಇರುತ್ತೆ ತಾನೇ? ಸುಮ್ಮನೆ ಮದುವೆಯಾಗು.

(ಸಂಗ್ರಹ)ಎಂ.ಕೆ. ಮಂಜುನಾಥ್, ಬೆಂಗಳೂರು

ಪತ್ರಿಕೆಯಲ್ಲಿ ಒಂದು ಜಾಹೀರಾತು ಪ್ರಕಟವಾಯಿತು: 'ಯಾವ ವ್ಯಕ್ತಿ ನನ್ನ ಪರ್ಸ್ ಕದ್ದಿರುವನೋ ಅವನನ್ನು ನಾನು 42ನೇ ನಂಬರ್ ಬಸ್‌ಸ್ಟಾಪಿನಲ್ಲಿ ನೋಡಿದ್ದೇನೆ.'

ಮರುದಿನ ಈ ಜಾಹೀರಾತಿಗೆ ಉತ್ತರವಾಗಿ ಇನ್ನೊಂದು ಜಾಹೀರಾತು ಪ್ರಕಟವಾಯಿತು.

'ನಾನು ನಾಳೆ ಮುಂಜಾನೆ 10 ಗಂಟೆಗೆ 42ನೇ ನಂಬರಿನ ಬಸ್‌ಸ್ಟಾಪಿನಲ್ಲಿ ಹಾಜರಿರುತ್ತೇನೆ. ಯಾವ ಮಹಾಶಯರು ತಮ್ಮ ಪರ್ಸ್ ಕಳೆದುಕೊಂಡಿದ್ದಾರೋ ಅವರು ನನ್ನನ್ನು ಗುರುತಿಸಿ ತಮ್ಮ ಪರ್ಸ್ ಪಡೆದುಕೊಳ್ಳಬಹುದು.'

★★★



ಅಡುಗೆ ಮನೆಯಲ್ಲಿ ಅದೇನನ್ನೋ ಮಾಡುತ್ತಿದ್ದ ಕಿಟ್ಟಿಗೆ ಅವನ ತಾಯಿ ಕೇಳಿದಳು.

ಕಿಟ್ಟಿ ಅಡುಗೆ ಮನೆಯಲ್ಲಿ ಬಹಳ ಹೊತ್ತಿನಿಂದ ಏನನ್ನು ಮಾಡುತ್ತಿರುವೆ?

'ಅಮ್ಮಾ, ನಾನು ಪಮ್ಮಿಗೆ ಸಹಾಯ ಮಾಡುತ್ತಿದ್ದೇನೆ.'

'ಪಮ್ಮಿ ಏನು ಮಾಡುತ್ತಿದ್ದಾಳೆ ಅಲ್ಲಿ?'

'ನೀನು ಮಾಡಿಟ್ಟ ಲಾಡುಗಳನ್ನು ತಿನ್ನುತ್ತಿದ್ದಾಳೆ.'

(ಸಂಗ್ರಹ) ಮುರಳೀಧರ ಕುಲಕರ್ಣಿ